

# ಕರ್ನಾಟಕದ ವೈಷ್ಣವ ಕ್ಷೇತ್ರಗಳು

ಭಾರತಿ

**ಕರ್ನಾಟಕದಲ್ಲಿ ಮಾಧ್ವ ಅನುಯಾಯಿಗಳಿಗೆ ಪವಿತ್ರವಾದ ಹಲವಾರು ಯಾತ್ರಾಸ್ಥಳಗಳಿವೆ. ಅವುಗಳೆಲ್ಲವೂ ಯತಿಶ್ರೇಷ್ಠರ, ದಾಸವರೇಣ್ಯರ ಮಹಿಮಾವಿಶೇಷದಿಂದ ಕೂಡಿವೆ. ಇವುಗಳ ಪರಿಚಯ ಮಾಡಿಕೊಟ್ಟಿರುವ ಮೈಸೂರುವಾಸಿಯಾದ ಲೇಖಕಿಯ ಅನೇಕ ಲೇಖನಗಳು ಹಲವಾರು ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.**

ಉಡುಪಿಯ ಶ್ರೀಕೃಷ್ಣ ಮಠ

**ಕ**ರ್ನಾಟಕವು ವಿವಿಧ ಧರ್ಮಗಳಿಗೆ ಆಸರೆಯನ್ನಿತ್ತಿರುವ, ವಿಶಾಲ ಮನೋಧರ್ಮ, ಉದಾರ ಸಂಸ್ಕೃತಿ ಮತ್ತು ವಿಶಿಷ್ಟ ಇತಿಹಾಸವುಳ್ಳ ರಾಜ್ಯವಾಗಿದೆ. ಇಲ್ಲಿನ ಉಡುಪಿ ಜಿಲ್ಲೆಯ ಪಾಜಕ ಎಂಬಲ್ಲಿ ಅವತರಿಸಿದ ಶ್ರೀಮಧ್ವಾಚಾರ್ಯರು ತಮ್ಮ ಅದ್ಭುತವಾದ ತರ್ಕದಿಂದ ದ್ವೈತಸಿದ್ಧಾಂತವನ್ನು ಪ್ರತಿಪಾದಿಸಿದರು. ಅದರ ತಿರುಳಾಗಿ, **'ಹರಿ ಸರ್ವೋತ್ತಮ, ವಾಯು ಜೀವೋತ್ತಮ'** ಎಂದು ಘೋಷಿಸಿದರು. ಇವರ ಪ್ರಭಾವಕ್ಕೆ ಒಳಪಟ್ಟ ಅನೇಕ ವೈಷ್ಣವ ಕ್ಷೇತ್ರಗಳನ್ನು ನಾಡಿನಾದ್ಯಂತ ನಾವು ನೋಡಬಹುದು.

ಅಂತಹ ಕ್ಷೇತ್ರಗಳಲ್ಲಿ ಸುವಿಖ್ಯಾತ ಹಾಗೂ ಪ್ರಮುಖವಾದುವು ಎಂದರೆ, ಮಧ್ವಾಚಾರ್ಯರ ಸಾಧನಾಕ್ಷೇತ್ರವೂ ಅಷ್ಟಮಠಗಳ ನೆಲೆಯೂ ಆದ **ಉಡುಪಿ**, ಶ್ರೀಪಾದರಾಜರ ಬೃಂದಾವನ ಇರುವ ಕೋಲಾರ ಜಿಲ್ಲೆಯ **ಮುಳಬಾಗಿಲು**, ಪೂಜ್ಯರಾದ ವಾದಿರಾಜ ಸ್ವಾಮಿಗಳ ಬೃಂದಾವನ ಕ್ಷೇತ್ರವಾದ ಉತ್ತರಕನ್ನಡ ಜಿಲ್ಲೆಯ **ಸೋಂದಾ** ಮತ್ತು ಶ್ರೀರಾಘವೇಂದ್ರ ಸ್ವಾಮಿಗಳ ಮಹಿಮೆಯಿಂದ ವಿಶ್ವವಿಖ್ಯಾತವಾದ **ಮಂತ್ರಾಲಯ.**

## ಉಡುಪಿ

ಉಡುಪ ಅಥವಾ ಉಡುಪತಿ ಎಂದರೆ ಚಂದ್ರ ಎಂದರ್ಥ. ಚಂದ್ರನು ಒಮ್ಮೆ ದಕ್ಷಪ್ರಜಾಪತಿಯ ಶಾಪಕ್ಕೆ ಗುರಿಯಾದಾಗ, ಅದರಿಂದ ವಿಮುಕ್ತಿ ಪಡೆಯಲು, ಪರಮೇಶ್ವರನನ್ನು ಕುರಿತು ಉಡುಪಿಯ ಅರಣ್ಯದಲ್ಲಿ ತಪವನ್ನು ಆಚರಿಸಿದನಂತೆ. ಅವನು ತಪಸ್ಸು ಮಾಡಿದ ಸ್ಥಾನವೇ, ಈಗ ಚಂದ್ರಮೌಳೀಶ್ವರ ದೇವಸ್ಥಾನವಾಗಿದೆ. ಅದರ ಸನಿಹದಲ್ಲಿಯೇ ಇರುವ ಇನ್ನೊಂದು ಶಿವಾಲಯವೆಂದರೆ, ಅನಂತೇಶ್ವರ ದೇವಸ್ಥಾನ. ಇದನ್ನು ಪರಶುರಾಮನ ಆದೇಶದಂತೆ, ರಾಮಭೋಜ ಎಂಬುವವರು ನಿರ್ಮಿಸಿದರೆಂದು ಹೇಳುತ್ತಾರೆ.

ಉಡುಪಿಯ ಕೇಂದ್ರಬಿಂದು ಶ್ರೀಕೃಷ್ಣ ಮಠ. ಮಹಾದ್ವಾರವನ್ನು ದಾಟಿ, ಒಳಕ್ಕೆ ಹೋದರೆ, ಬಲಭಾಗದಲ್ಲಿ ಮಧ್ವ ಸರೋವರವನ್ನು ಕಾಣಬಹುದು. ಅದಕ್ಕೆ ಎದುರಾಗಿ, ಎಡಭಾಗದಲ್ಲಿ ಪ್ರವೇಶ. ಅಲ್ಲಿ ಕಾಣಬರುವ ಶ್ರೀಚೆನ್ನಕೇಶವ ಮೂರುತಿಯ ಹಿಂಬದಿಯ ಗರ್ಭಗುಡಿಯಲ್ಲಿ, ಪಶ್ಚಿಮಾಭಿಮುಖವಾಗಿ, ಕಡೆಗೋಲು ಹಿಡಿದ ಶ್ರೀಕೃಷ್ಣನ ಅಪೂರ್ವ ವಿಗ್ರಹ ಕಂಡುಬರುತ್ತದೆ. ಈ ಮೂರ್ತಿಯ ಎದುರಿಗೆ ಯಾವ ದ್ವಾರವೂ ಇಲ್ಲ. ಎದುರಿನಿಂದ ದೇವರನ್ನು ದರ್ಶಿಸಲು ನವಗ್ರಹಗಳ ಕೆತ್ತನೆ ಇದ್ದು, ನವದ್ವಾರವಿರುವ ಕಿಟಕಿ ಇದೆ. ಅದಕ್ಕೆ ಎದುರಾಗಿ ಗೋಡೆಯಲ್ಲಿ ಪ್ರಸಿದ್ಧ **'ಕನಕನ ಕಿಂಡಿ'** ಕಾಣಬರುತ್ತದೆ. ದೇವಾಲಯದ ಒಳಮುಖದ ಅಂಗಣದಲ್ಲಿ ಒಂದೆಡೆ ಪೂಜ್ಯ ಶ್ರೀವಾದಿರಾಜರು ಪ್ರತಿಷ್ಠಾಪಿಸಿದ ಪ್ರಾಣದೇವರ ಸಾನ್ನಿಧ್ಯವಿದೆ. ಹಾಗೆಯೇ ಮುಂದುವರಿದರೆ, ಬಲಗಡೆಯಲ್ಲಿ ಶ್ರೀಸುಬ್ರಹ್ಮಣ್ಯ ದೇಗುಲವಿದೆ.

ಈ ಮೂಲವಿಗ್ರಹವನ್ನು ಶ್ರೀಕೃಷ್ಣನೇ ದ್ವಾಪರಯುಗದಲ್ಲಿ ಕಪ್ಪು ಸಾಲಿಗ್ರಾಮ ಶಿಲೆಯಿಂದ ಮಾಡಿಸಿದನೆಂದು ಐತಿಹ್ಯ. ಒಮ್ಮೆ ಶ್ರೀಮಧ್ವಾಚಾರ್ಯರು ಮುಳುಗುತ್ತಿದ್ದ ಹಡಗೊಂದನ್ನು ರಕ್ಷಿಸಿದರು. ಕೃತಜ್ಞತೆಯ ಕುರುಹಾಗಿ, ನಾವಿಕರು ನೀಡಿದ ಗೋಪೀಚಂದನದ ಗಡ್ಡೆಯೊಂದರಲ್ಲಿ ಹುದುಗಿದ್ದ ಈ ಸುಂದರ ವಿಗ್ರಹವನ್ನು ಪಡೆದುಕೊಂಡರು. ಉಡುಪಿಯಿಂದ ಸುಮಾರು ೩೦ ಕಿ.ಮೀ. ಪಶ್ಚಿಮಕ್ಕೆ ಇರುವ ವಡಭಾಂಡೇಶ್ವರ ಎಂಬಲ್ಲಿ,

ಗಡ್ಡೆಯನ್ನು ಒಡೆದು, ಶ್ರೀಕೃಷ್ಣನ ವಿಗ್ರಹವನ್ನು ಉಡುಪಿಯವರೆಗೆ ಹೊತ್ತುಕೊಂಡೇ ಬಂದರು. ಬರುವಾಗ, 'ದ್ವಾದಶಸ್ತೋತ್ರ' ಎಂದು ಪ್ರಸಿದ್ಧವಾದ ಸ್ತುತಿಯನ್ನು ಹೇಳಿಕೊಳ್ಳುತ್ತಿದ್ದರು.

ಹೀಗೆ ಬಾಲಕೃಷ್ಣನನ್ನು ಪ್ರತಿಷ್ಠಾಪಿಸಿದ ಶ್ರೀಮಧ್ವಾಚಾರ್ಯರು, ಅದರ ಪೂಜೆಯನ್ನು ತಮ್ಮ ಎಂಟು ಜನ ಸಂನ್ಯಾಸಿ ಶಿಷ್ಯರಿಗೆ ವಹಿಸಿದರು. ಪರ್ಯಾಯ ಕ್ರಮದಲ್ಲಿ ಆ ಶಿಷ್ಯರು ಭಗವಂತನ ಆರಾಧನೆಯನ್ನು ಅನವರತ ಮಾಡಿಕೊಂಡು ಬರುವಂತೆ ಏರ್ಪಾಡು ಮಾಡಿದರು. ಮುಂದೆ ಆ ಶಿಷ್ಯರುಗಳಿಂದ ಅಷ್ಟಮಠಗಳು ಪ್ರವರ್ತನಗೊಂಡವು. ಅವು ಯಾವುವೆಂದರೆ, **ಫಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಸೋದೆ, ಪೇಜಾವರ, ಕಾಣಿಯೂರು.** ಎರಡು ತಿಂಗಳಿಗೊಮ್ಮೆ ಇದ್ದ ಈ ಪರ್ಯಾಯ ಕ್ರಮವನ್ನು ಮುಂದೆ ಶ್ರೀವಾದಿರಾಜರು, ಎರಡು ವರ್ಷಕ್ಕೆ ಇರುವಂತೆ ಬದಲಾಯಿಸಿದರು. ಈಗಲೂ ಅದೇ ಪದ್ಧತಿ ಮುಂದುವರಿದುಕೊಂಡು ಬಂದಿದೆ.

ಉಡುಪಿಯ ಬಳಿಯ **'ಪಾಜಕ ಕ್ಷೇತ್ರ'** ಆಚಾರ್ಯ ಮಧ್ವರ ಜನ್ಮಸ್ಥಾನ. ಇಲ್ಲಿ ಇರುವ ಕುಂಜಾರು ಗುಡ್ಡದ ಮೇಲೆ ದೇವಿಯ ದೇವಸ್ಥಾನವಿದೆ. ಮಧ್ವಾಚಾರ್ಯರ ಬಾಲ್ಯಜೀವನದಲ್ಲಿ ನಡೆದ ಹಲವಾರು ಮಹತ್ವದ ಘಟನೆಗಳಿಗೆ ಈ ಕ್ಷೇತ್ರ ಸಾಕ್ಷಿಯಾಗಿರುವುದನ್ನು ಕಾಣುತ್ತೇವೆ.

ಉಡುಪಿಯ ಶ್ರೀಕೃಷ್ಣನನ್ನು **'ಅನ್ನಬ್ರಹ್ಮ'** ನೆಂದು ಕರೆಯುತ್ತಾರೆ. ಬಂದ ಭಕ್ತರಿಗೆಲ್ಲ ಇಲ್ಲಿ ಪ್ರಸಾದದ ವ್ಯವಸ್ಥೆ ಇದೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯ ಉತ್ಸವ, ವರ್ಷಕ್ಕೊಮ್ಮೆ ರಥೋತ್ಸವ, ಲಕ್ಷದೀಪೋತ್ಸವ, ಶ್ರೀಕೃಷ್ಣ ಜಯಂತಿ ಮುಂತಾದವು ಇಲ್ಲಿನ ಪ್ರಮುಖ ಉತ್ಸವಗಳು.

ಶ್ರೀಕೃಷ್ಣಮಠವಿರುವ ರಥಬೀದಿಯಲ್ಲಿ ಅಷ್ಟಮಠಗಳ ಭವ್ಯ ಕಟ್ಟಡಗಳನ್ನು ಕಾಣಬಹುದು. ಇಲ್ಲಿ ಪೂಜೆಪುನಸ್ಕಾರಗಳ ಜೊತೆಗೆ, ನ್ಯಾಯ–ವೇದಾಂತ–ತರ್ಕ–ಮೀಮಾಂಸಾ ಶಾಸ್ತ್ರಗಳ ಅಧ್ಯಯನ ಮತ್ತು ಅಧ್ಯಾಪನಗಳಿಗೆ ಅವಕಾಶವಿದೆ. ಉಡುಪಿಯಲ್ಲಿ ಒಂದು ಸಂಸ್ಕೃತ ಮಹಾವಿದ್ಯಾಲಯವೂ ಇದೆ.

## ಮಂತ್ರಾಲಯ

ಕರ್ನಾಟಕದ ಗಡಿಗೇ ಅಂಟಿಕೊಂಡಿರುವಂತೆ ಇರುವ, ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ ತಾಲೋಕಿನಲ್ಲಿರುವ **ಮಂತ್ರಾಲಯ,** ಶ್ರೀರಾಘವೇಂದ್ರ ಸ್ವಾಮಿಗಳ ಬೃಂದಾವನವಿರುವ ಅತ್ಯಂತ ಪ್ರಸಿದ್ಧ ತೀರ್ಥಕ್ಷೇತ್ರ. **"ದೇವರೆಂದರೆ ತಿರುಪತಿ ತಿಮ್ಮಪ್ಪ ಗುರುಗಳೆಂದರೆ ಮಂಚಾಲೆ ರಾಘಪ್ಪ"** ಎನ್ನುವುದು ಭಕ್ತರಲ್ಲಿ ಜನಜನಿತವಾದ ಮಾತು. **'ಶ್ರೀರಾಯರು'** ಎಂದೇ ಪ್ರಖ್ಯಾತರಾಗಿರುವ ಶ್ರೀರಾಘವೇಂದ್ರ ತೀರ್ಥರು, ಶ್ರೇಷ್ಠ ಯತಿಗಳು, ಬಹಳ ದೊಡ್ಡ ವಿದ್ವಾಂಸರು, ವೈಷ್ಣವ ತತ್ತ್ವಪ್ರಸಾರಕರು, ಭಕ್ತರಿಗೆ ಅನುಕಂಪವನ್ನು ತೋರುವವರು ಮತ್ತು ಸಮಾಜ ಸುಧಾರಕರು ಎಂದು ಹೆಸರಾಗಿದ್ದಾರೆ. ತಮ್ಮ ಜೀವಿತಕಾಲದಲ್ಲಿ ಅಗಾಧ ಅತೀಂದ್ರಿಯ ಶಕ್ತಿಯನ್ನು ಪ್ರದರ್ಶಿಸಿದ ಈ ಮಹನೀಯರ



ಉಡುಪಿಯ ಶ್ರೀಕೃಷ್ಣ

ಪ್ರಭಾವ ಇಂದಿಗೂ ಅಗಾಧವಾಗಿಯೇ ಇದೆ. ತುಂಗಭದ್ರಾ ತೀರದಲ್ಲಿರುವ ಮಂತ್ರಾಲಯದ ಕೇಂದ್ರಬಿಂದು ಶ್ರೀರಾಯರ ಬೃಂದಾವನವೇ. ಹಾಗೆಯೇ ಸ್ಥಳದೇವತೆಯಾದ ಮಂಚಾಲಮ್ಮನ ಗುಡಿಯೂ ಇಲ್ಲಿದೆ. ನಿತ್ಯವೂ ಸಾವಿರಾರು ಭಕ್ತರು ಬೃಂದಾವನದ ದರ್ಶನಕ್ಕಾಗಿ ಬರುತ್ತಾರೆ. ವರ್ಷಪೂರ್ತಿ ಇಲ್ಲಿ ಉತ್ಸವಗಳು ನಡೆಯುತ್ತಲೇ ಇರುತ್ತವೆ. ಅವುಗಳಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನೆ ಅತ್ಯಂತ ವಿಶೇಷವಾದುದು.

## ಮುಳಬಾಗಿಲು

ಈ ಕ್ಷೇತ್ರಕ್ಕೆ 'ಮೂಡಲಬಾಗಿಲು', 'ಪೂರ್ವಕವಾಟಪುರಿ' ಎಂಬ ಹೆಸರುಗಳಿವೆ. ಇಲ್ಲಿಗೆ ಸಮೀಪದಲ್ಲಿ, ದಾಸಕೂಟದ ಅಗ್ರೇಸರರಾದ ಶ್ರೀಪಾದರಾಜರ ಬೃಂದಾವನ, ಶ್ರೀನೃಸಿಂಹ ತೀರ್ಥವೆಂಬ ಕೊಳ ಇವೆ ಹಾಗೂ ಭವ್ಯವಾದ ಆಂಜನೇಯ ಸ್ವಾಮಿಯ ದೇವಸ್ಥಾನವೂ ಕಂಡುಬರುತ್ತದೆ. ಮುಳಬಾಗಲಿನ ಮುಖ್ಯ ರಸ್ತೆಯ ಪಕ್ಕಕ್ಕೆ, ಅನತಿದೂರದಲ್ಲಿ ಒಂದು ಬೆಟ್ಟ ಕಾಣಿಸುತ್ತದೆ. ಈ ಬೆಟ್ಟದ ಮೇಲೆ, ಶ್ರೀಮಧ್ವಾಚಾರ್ಯರ ಶಿಷ್ಯರಾದ ಅಕ್ಷೋಭ್ಯತೀರ್ಥರೂ, ಶೃಂಗೇರಿ ಮಠಾಧಿಪತಿಗಳಾಗಿದ್ದ ಶ್ರೀವಿದ್ಯಾರಣ್ಯರೂ ವಾಕ್ಯಾರ್ಥ ಮಾಡಿದರೆಂದು ಹೇಳಲಾಗಿದೆ. ಈ ವಾದದಲ್ಲಿ, ಪ್ರಸಿದ್ಧ ಶ್ರೀವೈಷ್ಣವ ದಾರ್ಶನಿಕರಾದ ವೇದಾಂತ ದೇಶಿಕರೇ ನಿರ್ಣಯಕಾರರಾಗಿದ್ದರೆಂಬ ಪ್ರತೀತಿಯೂ ಇದೆ.

ಮುಳಬಾಗಿಲಿಗೆ ೨–೩ ಕಿ.ಮೀ. ದೂರದಲ್ಲಿ ನೃಸಿಂಹ ತೀರ್ಥದ ಆಸುಪಾಸಿನಲ್ಲಿಯೇ ಶ್ರೀಪಾದರಾಜರ ಬೃಂದಾವನ ಇದೆ. ಅದಕ್ಕೆ ಸಮೀಪದಲ್ಲಿ, ಅವರೇ ಸ್ಥಾಪಿಸಿರುವ ಯೋಗಾನರಸಿಂಹ ಸನ್ನಿಧಿ ಮತ್ತು ಅವರ ಪ್ರಿಯಶಿಷ್ಯರಾಗಿದ್ದ ಶ್ರೀವ್ಯಾಸರಾಜರು ತಪಸ್ಸು

ಮಾಡಿದ ಗುಹೆ – ಇಲ್ಲಿನ ಇತರ ಆಕರ್ಷಣೆಗಳು. ಶ್ರೀಪಾದರಾಜ ಮಠವು ವೈಷ್ಣವ ಸಂಪ್ರದಾಯದಲ್ಲಿ ಪ್ರಮುಖವಾದ ಆಧ್ಯಾತ್ಮಿಕ ಕೇಂದ್ರವಾಗಿದೆ. ಇದರ ವತಿಯಿಂದ ಸಂಸ್ಕೃತ ಸದಸ್ಸು ಕೂಡ ನಡೆಯುತ್ತದೆ.

ತಿರುಪತಿ ಯಾತ್ರೆಗೆ ತೆರಳುವ ಭಕ್ತರು ಇಲ್ಲಿನ ಪುಣ್ಯಕ್ಷೇತ್ರಗಳ ದರ್ಶನ ಪಡೆದು ಮುಂದುವರಿಯುವುದು ಒಂದು ಸಂಪ್ರದಾಯ. ಪ್ರತಿವರ್ಷ ಜರುಗುವ ಶ್ರೀಪಾದರಾಜರ ಆರಾಧನೆಗೆ ಸಾವಿರಾರು ಜನ ಸೇರುತ್ತಾರೆ.

### ಮಳಖೇಡ

ಮೊದಲಿಗೆ 'ಮಾನ್ಯಖೇಟ' ಎಂದೇ ಪ್ರಖ್ಯಾತವಾಗಿದ್ದ ಈ ಊರು ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲೋಕಿನಲ್ಲಿ ಇರುವ ಈ ಪಟ್ಟಣದಲ್ಲಿ **'ಟೀಕಾಚಾರ್ಯರು'** ಎಂದೇ ಪ್ರಖ್ಯಾತವಾದ ಶ್ರೀಜಯತೀರ್ಥರ ಬೃಂದಾವನ ಇದೆ.

### ಸೋಂದಾ

ಉತ್ತರ ಕರ್ನಾಟಕದ ದಟ್ಟ ಅರಣ್ಯ ಪರಿಸರದ ಮಧ್ಯೆ, ಶಿರಸಿ ಪಟ್ಟಣಕ್ಕೆ ೧೮ ಕಿ.ಮೀ. ದೂರದಲ್ಲಿ ಇರುವ ಸೋಂದಾ ಅಥವಾ ಸೋದೆಯ ವಿಶೇಷವೆಂದರೆ, ಇದು ಜೈನ–ವೈಷ್ಣವ–ಸ್ಮಾರ್ತ–ವೀರಶೈವ ಸಂಪ್ರದಾಯಗಳೆಲ್ಲಕ್ಕೂ ಪವಿತ್ರಕ್ಷೇತ್ರವಾಗಿರುವುದು.

ಇಲ್ಲಿ ಶ್ರೀವಾದಿರಾಜ ಸ್ವಾಮಿಗಳ ವೃಂದಾವನವಿದೆ. ಕ್ರಿ.ಶ.೧೪೮೦ ರಿಂದ ೧೬೦೦ ರವರೆಗೆ ಜೀವಿಸಿದ್ದ ಇವರು ಅಗಮ್ಯಮಹಿಮರು. ಇವರದು ೧೨೦ ವರ್ಷಗಳ ಸಾರ್ಥಕ ಬದುಕು. ರಮಾತ್ರಿವಿಕ್ರಮ ದೇವಸ್ಥಾನ, ಭೂತರಾಜರ ಸನ್ನಿಧಿ, ಧವಳಗಂಗಾ ತೀರದ ಶ್ರೀಗೋಪಾಲಕೃಷ್ಣ ದೇವಸ್ಥಾನ, ಶ್ರೀಹಯಗ್ರೀವ ತಟಾಕ, ಶ್ರೀವಾದಿರಾಜರ ಬೃಂದಾವನ – ಇಲ್ಲಿನ ವೈಶಿಷ್ಟ್ಯಗಳು. ದಟ್ಟ ಅರಣ್ಯದ ಮಧ್ಯೆ, ಶಾಲ್ಮಲೀ ನದೀ ತೀರದಲ್ಲಿ, ಶ್ರೀವಾದಿರಾಜರು ತಪಸ್ಸು ಮಾಡಿದ 'ತಪೋವನ' ಎಂಬ ಪ್ರದೇಶ ಅತ್ಯಂತ ರಮಣೀಯ ಹಾಗೂ ಜಾಗೃತಸ್ಥಾನ.

ಸೋದೆ ಹಿಂದೆ ಒಂದು ರಾಜಸಂಸ್ಥಾನವಾಗಿತ್ತು. ಇದನ್ನು ಆಳುತ್ತಿದ್ದ ಅರಸಪ್ಪ ನಾಯಕನೆಂಬುವವನು ಶ್ರೀವಾದಿರಾಜರ ಪ್ರಿಯಶಿಷ್ಯನಾಗಿದ್ದ. ಪ್ರತಿ ವರ್ಷ ಫಾಲ್ಗುಣ ಬಹುಳ ತೃತೀಯದಂದು ಶ್ರೀವಾದಿರಾಜರ ಆರಾಧನೆ ಇಲ್ಲಿ ನಡೆಯುತ್ತದೆ.

### ನವವೃಂದಾವನ

ಹೊಸಪೇಟೆಯ ಸಮೀಪದಲ್ಲಿ ತುಂಗಭದ್ರಾ ನದಿಯ ನಡುಗಡ್ಡೆಯಲ್ಲಿ ಇರುವ **'ನವವೃಂದಾವನ'** ದಲ್ಲಿ ಒಂಬತ್ತು ಜನ ಯತಿಗಳ ಬೃಂದಾವನಗಳಿವೆ. ಅವರೆಂದರೆ, ಶ್ರೀಪದ್ಮನಾಭ ತೀರ್ಥರು, ಶ್ರೀವ್ಯಾಸರಾಜರು, ಶ್ರೀಶಮೀಂದ್ರತೀರ್ಥರು, ಶ್ರೀವಾಗೀಶತೀರ್ಥರು, ಶ್ರೀರಘುವರತೀರ್ಥರು, ಶ್ರೀಗೋವಿಂದ ಒಡೆಯರು, ಶ್ರೀಶ್ರೀನಿವಾಸತೀರ್ಥರು, ಶ್ರೀಶ್ರೀರಾಮತೀರ್ಥರು ಮತ್ತು ಶ್ರೀಸುಧೀಂದ್ರತೀರ್ಥರು. ಹಂಪಿಯಲ್ಲಿರುವ **'ಪುರಂದರ ಮಂಟಪ',** ಆನೆಗೊಂದಿಯಲ್ಲಿರುವ ಶ್ರೀನರಹರಿತೀರ್ಥರು ಮತ್ತು ಶ್ರೀರಘುನಂದನತೀರ್ಥರ ಬೃಂದಾವನ – ಇವು ಸಮೀಪದಲ್ಲಿಯೇ ಇರುವ ಇನ್ನಿತರ ಪುಣ್ಯಕ್ಷೇತ್ರಗಳು.

### ಇತರೆ ಕ್ಷೇತ್ರಗಳು

ಬಿಜಾಪುರದ ಸಮೀಪದಲ್ಲಿ ಇರುವ **ಕಾಖಂಡಿಕಿ** ಎಂಬಲ್ಲಿ ಮಾಧ್ವಯತಿಗಳೂ, ಹರಿದಾಸರೂ ಆದ ಶ್ರೀಮಹಿಪತಿದಾಸರು ನೆಲೆಸಿ ವೃಂದಾವನಸ್ಥರಾದರು. ಅದೇ ಪರಿಸರದಲ್ಲಿ ಇರುವ **ತೊರವಿ** ಎಂಬಲ್ಲಿ ಇರುವ ನರಸಿಂಹದೇವರ ಸನ್ನಿಧಿ ಪ್ರಸಿದ್ಧವಾದುದು. ಶ್ರೀಪುರಂದರದಾಸರು ಈ ದೇವರನ್ನು ಕುರಿತು ಹಾಡಿದ್ದಾರೆ. ಹರಪನಹಳ್ಳಿಯ ಭೀಮವ್ವ, ಮಲೆಬೆನ್ನೂರು ಸಮೀಪದ ಹೆಳವನಕಟ್ಟೆಯ ಗಿರಿಯಮ್ಮ ಸ್ತ್ರೀಭಕ್ತಶಿರೋಮಣಿಗಳಾಗಿದ್ದವರು. ಹರಿದಾಸರಾದ ಶ್ರೀಪ್ರಸನ್ನವೆಂಕಟದಾಸರು ಬಾಗಲಕೋಟೆ ಜಿಲ್ಲೆಯ **ಬಾದಾಮಿಯ** ಪರಿಸರದವರು. ಕರ್ನಾಟಕದ ಗಡಿಪ್ರದೇಶಕ್ಕೆ ಸಮೀಪವಿರುವ ಗುಂತಕಲ್ಲಿನ ಬಳಿ ಇರುವ **ಚೀಕಲಪರವಿ** ಮತ್ತು **ಚಿಪ್ಪಗಿರಿಗಳು** ದಾಸಪರಂಪರೆಯಲ್ಲಿ ಸುವಿಖ್ಯಾತರಾದ ಶ್ರೀವಿಜಯದಾಸರ ಕಾರ್ಯಕ್ಷೇತ್ರಗಳು. ರಾಯಚೂರು ಜಿಲ್ಲೆಯ **ಮಾನ್ವಿ** 'ಶ್ರೀಹರಿಕಥಾಮೃತಸಾರ' ವೆಂಬ ಉದ್ಗ್ರಂಥವನ್ನು ರಚಿಸಿದ ಶ್ರೀಜಗನ್ನಾಥದಾಸರ ಹುಟ್ಟೂರು. ಹಾಗೆಯೇ, ಸಮೀಪದ **ಉತ್ತನೂರು** ಎಂಬಲ್ಲಿ ಇನ್ನೊಬ್ಬ ಪ್ರಮುಖ ಹರಿದಾಸರಾದ ಶ್ರೀಗೋಪಾಲದಾಸರು ಜನ್ಮ ತಾಳಿದರು.

ಶಿವಮೊಗ್ಗ ಜಿಲ್ಲೆಯ, ತೀರ್ಥಹಳ್ಳಿ ಸಮೀಪದ **'ಭೀಮಸೇತು'** ಅಥವಾ **'ಭೀಮನಕಟ್ಟೆ'** ಮತ್ತು **'ಬಾಳಗಾರು'** ಎಂಬಲ್ಲಿರುವ ಮಾಧ್ವ ಮಠಗಳು ಪ್ರಸಿದ್ಧವಾದುವು. ಸುಪ್ರಸಿದ್ಧ **ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ** ದಲ್ಲಿರುವ ಮಾಧ್ವಮಠ ಹೆಸರಾದುದು. ಚನ್ನಪಟ್ಟಣ ತಾಲೋಕಿನ **ಅಬ್ಬೂರು,** ಶ್ರೀಪಾದರಾಜರ ಜನ್ಮಸ್ಥಳವಾದರೆ, ಮೈಸೂರಿಗೆ ಸಮೀಪದ **ಬನ್ನೂರು** ಅವರ ಪ್ರಿಯಶಿಷ್ಯರಾದ ಶ್ರೀವ್ಯಾಸರಾಯರು ಹುಟ್ಟಿದ ಊರು. ತಿರುಮಕೂಡಲು ನರಸೀಪುರದ ಹತ್ತಿರದ **ಸೋಸಲೆ**ಯಲ್ಲಿ ಪ್ರಸಿದ್ಧ ವ್ಯಾಸರಾಜರ ಮಠವಿದೆ. ತುಂಗಾ ಮತ್ತು ಭದ್ರಾ ನದಿಗಳ ಸಂಗಮಕ್ಷೇತ್ರವಾದ **ಕೂಡಲಿ**ಯಲ್ಲಿ ಅಕ್ಷೋಭ್ಯ ತೀರ್ಥರ ಮಠವನ್ನು ಕಾಣಬಹುದು. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಮಹಾತ್ಮರು ನೆಲೆಸಿ ಪವಿತ್ರಗೊಳಿಸಿದ ಇನ್ನು ಕೆಲವು ಕ್ಷೇತ್ರಗಳು ಹೀಗಿವೆ: **ವೇಣೀಸೋಮಪುರ** (ಶ್ರೀವ್ಯಾಸತತ್ತ್ವಜ್ಞರು), **ಇಭರಾಂಪುರ** (ಕೃಷ್ಣಾಚಾರ್ಯರೆಂಬ ಅವಧೂತರು), **ಭಿಕ್ಷಾಲಯ** ಅಥವಾ **ಬಿಚ್ಚಾಲೆ** (ರಾಘವೇಂದ್ರ ಸ್ವಾಮಿಗಳ ಪ್ರಿಯ ಶಿಷ್ಯರಾಗಿದ್ದ ಶ್ರೀ ಅಪ್ಪಣಾಚಾರ್ಯರ ಕ್ಷೇತ್ರ), **ಮಜ್ಜಿಗೆಹಳ್ಳಿ** (ಶ್ರೀಮಾಧವ ತೀರ್ಥರು).

ಇದಲ್ಲದೆ ಕರ್ನಾಟಕದಾದ್ಯಂತ ಇರುವ ಮಾಧ್ವಮಠಗಳು, ಶ್ರೀರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ಬೃಂದಾವನಗಳು ಹಾಗೂ ನೂರಾರು ದೇವಸ್ಥಾನಗಳು ವೈಷ್ಣವ ಪುಣ್ಯಕ್ಷೇತ್ರಗಳ ಗುಂಪಿಗೆ ಸೇರುತ್ತವೆ.